## GENERAL INSTRUCTIONS TO THE CANDIDATE

1. Candidates shall read all the instructions carefully before submitting the applications, so as to avoid the mistakes.

2. Candidates must specifically indicate the Residual Parent Cadre / Local Cadre of reservation in the column earmarked in the application under which candidate would like to be considered. Further candidate is not permitted to change the Residual Parent Cadre / Local cadre claimed in the application. (Local Cadre means Reservation to the candidates belonging to Hyderabad Karnataka Region).

3. Candidates shall provide the Mobile number and valid E-mail ID (mandatory), for communication at relevant columns while submitting online application. The authority is not responsible for non receipt of SMS or E-mail due to incorrect information.

4. To avoid last minute rush, the candidates are advised to submit the online applications well in advance. The website will accept the applications round the clock up to **16th October 2021 till 11.59 p.m.**

5. The decision of the High Court of Karnataka will be final, as to the eligibility for Written Test & Viva - Voce or otherwise of an applicant.

6. The list of eligible candidates short listed for written test / Viva Voce will be published on the High Court of Karnataka website – *https://karnatakajudiciary.kar.nic.in/recruitment.php*

7. Intimation will be sent to the eligible candidates through SMS to Cell phone and also an email will be sent to Email-Id. The list of short listed candidates will also be notified on the High Court of Karnataka website: *https://karnatakajudiciary.kar.nic.in/recruitment.php* for downloading the "Call- Letter". Candidate must bring his/her 'Call-Letter', at the time of appearing for the Tests / Viva- Voce.

8. Candidates shall have to appear for the Written Test and Viva-Voce if called for, at their own expenses at the place and time decided and notified by the High Court of Karnataka.

*Contd.,*

9. Candidates shall produce the copy of "Call Letter" and "Identity Proof" i.e. Voter ID or Aadhaar Card or PAN Card or Driving Licence or Ration card or Passport in Original as a proof of identity while appearing for the Written Test / Viva -Voce for verification.

10. Candidates shall produce all the original testimonials with a set of self attested photo copies i.e., Certificates of SSLC/X Std, Degree, Master Degree, Caste Certificate, Certificates for claiming any reservations if any, 2 Passport size photographs and also three Character Certificates (one from last studied education institution and two from the respectable persons) while appearing for the Written Test & Viva-voce for verification purpose.

11. On the basis of marks obtained in Written Test, candidates will be short listed for viva - voce.

12. Mere success in the Written Test and/or viva - voce shall not confer any right to appointment and no candidate shall be appointed to the post unless the High Court of Karnataka is satisfied, after such enquiries as may be considered necessary that the candidate is suitable in all respects for appointment to the post.

13. Candidates shall pay the appropriate Application Fee as mentioned in the notification, either by mode of online banking or through Challan form as notified by the High Court of Karnataka. The fee shall be remitted at any branch of the State Bank of India (SBI).

14. Candidates shall scan his/her latest passport size photograph with white back ground (having 5 cm of length X 3.6 cm of breadth with max. size 50kb) and signature on white paper in black ball point pen (having 2.5 cm of length X 7.5 cm of breadth with max. size 25kb) in jpg format only and upload the same, while submitting the Online application. **The jpg image should be clear and visible, else the application will not be considered for acceptance.**

15. **Candidates shall upload their SSLC Marks Card, Degree and Master Degree in English Marks cards, Convocation certificates and other relevant certificate for claiming the reservations and the scanned documents have to be uploaded in PDF format only at the stage of submitting the**

*Contd.,*

**online application. The PDF documents should be clear and readable, else the application will not be considered for acceptance.**

16. If the candidates are employed/working in any State Government or Central Government or an establishment in public sector, the candidates shall mention at column No.14 **"Yes or No"** in the online application. If the candidate is selected, he/she shall produce **"No Objection Certificate"** from the concerned department, where he/she is working. [As per amended Rule 11 of Karnataka Civil Service (General Recruitment) Rules, 1977].

17. While applying online application for the post, the candidates shall ensure that he/she fulfills the eligibility and other norms as mentioned above and that all the particulars furnished by him/her are correct in all respects. In case, if it is found at any stage of recruitment that a candidate does not fulfill the eligibility norms and/or that he/she has suppressed/twisted or truncated any material facts, his/her candidature will stand cancelled. If any of these shortcomings is found even after appointment, his/her appointment shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution.

**Sd/-**
**(T.G.SHIVASHANKARE GOWDA)**
**REGISTRAR GENERAL**

# **ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು**

1. ಅಭ್ಯರ್ಥಿಗಳು, ಅರ್ಜಿ ಸಲ್ಲಿಸುವುದರಲ್ಲಿ ಆಗಬಹುದಾದ ತಪ್ಪುಗಳನ್ನು ತಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ಈ ಮುಂದೆ ಹೇಳಿರುವ ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು.

2. ಅಭ್ಯರ್ಥಿಯು, ಅರ್ಜಿಯನ್ನು ತುಂಬುವಾಗ, ತನ್ನನ್ನು ಯಾವ ಮೀಸಲಾತಿ ವೃಂದದಲ್ಲಿ ಪರಿಗಣಿಸಬೇಕೆಂದು ಇಚ್ಛಿಸುವನೊ/ಇಚ್ಛಿಸುವಳೋ ಅದನ್ನು ಅರ್ಜಿಯಲ್ಲಿ ಮೀಸಲಿರಿಸಿರುವ ಅಂಕಣದಲ್ಲಿನ ಉಳಿದ ಮೂಲವೃಂದ / ಸ್ಥಳೀಯ ವೃಂದವೆಂದು ಸ್ಪಷ್ಟವಾಗಿ ಗುರುತು ಮಾಡತಕ್ಕದ್ದು. ನಂತರ, ಅರ್ಜಿಯಲ್ಲಿ ಕೋರಿರುವ ಉಳಿದ ಮೂಲವೃಂದ / ಸ್ಥಳೀಯ ವೃಂದವನ್ನು ಬದಲಾಯಿಸಿಕೊಳ್ಳುವುದಕ್ಕೆ ಅನುಮತಿಸಲಾಗುವುದಿಲ್ಲ. (ಸ್ಥಳೀಯ ವೃಂದವೆಂದರೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾದ ವೃಂದ)

3. ಅರ್ಜಿಯಲ್ಲಿ ಸಂಪರ್ಕದ ಉದ್ದೇಶಕ್ಕೆ ಸಂಬಂಧಿಸಿದಂತೆ ಕೊಟ್ಟಿರುವ ಸೂಕ್ತ ಕಾಲಂಗಳನ್ನು ತುಂಬುವಾಗ ಸಂವಹನಕ್ಕಾಗಿ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐ.ಡಿಯನ್ನು (ಕಡ್ಡಾಯವಾಗಿ) ಸರಿಯಾಗಿ ನಮೂದಿಸತಕ್ಕದ್ದು. ಸರಿಯಾದ ಮಾಹಿತಿ ಒದಗಿಸದೆ ಎಸ್.ಎಂ.ಎಸ್ ಅಥವಾ ಇ–ಮೇಲ್ ಸಂದೇಶ ಬರದಿದ್ದಲ್ಲಿ ಪ್ರಾಧಿಕಾರ ಹೊಣೆಯಾಗುವುದಿಲ್ಲ.

4. ಕೊನೆ ಕ್ಷಣದಲ್ಲಿ, ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡವನ್ನು ತಪ್ಪಿಸಲು, ಅಭ್ಯರ್ಥಿಗಳು ಸಾಕಷ್ಟು ಮುಂಚಿತವಾಗಿಯೇ ಅರ್ಜಿ ಸಲ್ಲಿಸುವುದು ಸೂಕ್ತ. ವೆಬ್‌ಸೈಟ್ **16ನೇ ಅಕ್ಟೋಬರ್ 2021ರ ರಾತ್ರಿ 11.59 ಗಂಟೆಯೊಳಗೆ** ಸಲ್ಲಿಸಿದ ಅರ್ಜಿಗಳನ್ನಷ್ಟೇ ಅಂಗೀಕರಿಸುತ್ತದೆ.

5. ಅಭ್ಯರ್ಥಿಯ ಲಿಖಿತ ಪರೀಕ್ಷೆ ಅಥವಾ ಅನ್ಯಥಾ ಮೌಖಿಕ ಸಂದರ್ಶನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಧಾರವೇ ಅಂತಿಮವಾಗಿರುತ್ತದೆ.

6. ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನಕ್ಕಾಗಿ ಅಂಗೀಕರಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ **https://karnatakajudiciary.kar.nic.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

7. ಅರ್ಹ ಅಭ್ಯರ್ಥಿಗಳ ಮೊಬೈಲ್‌ಗೆ ಸಂದೇಶವನ್ನು ಕಳುಹಿಸುವ ಮೂಲಕ ಅಥವಾ ಇ–ಮೇಲ್ ವಿಳಾಸ ನೀಡಿದ್ದಲ್ಲಿ ಇ–ಮೇಲ್ ಮೂಲಕ ಮಾಹಿತಿಯನ್ನು ನೀಡಲಾಗುವುದು. "ಕರೆ ಪತ್ರ" ವನ್ನು ಡೌನ್ ಲೋಡ್ ಮಾಡಿಕೊಳ್ಳುವುದಕ್ಕಾಗಿ, ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು **https://karnatakajudiciary.kar.nic.in/recruitment.php** ಎಂಬ ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿಯೂ ಸಹ ಅಧಿಸೂಚಿಸಲಾಗುವುದು. ಅಭ್ಯರ್ಥಿಯು ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನ ಸಮಯದಲ್ಲಿ ಆತನ/ಆಕೆಯ "ಕರೆ ಪತ್ರ" ವನ್ನು ತರತಕ್ಕದ್ದು.

**ಮುಂದುವರಿದಿದೆ...**

8. ಅಭ್ಯರ್ಥಿಯು, ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನಕ್ಕೆ ಅರ್ಹನಾಗಿದ್ದ ಪಕ್ಷದಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯವು ನಿರ್ಧರಿಸಿದ ಮತ್ತು ಅಧಿಸೂಚಿಸಿದ ಸ್ಥಳ ಮತ್ತು ಸಮಯಕ್ಕೆ ಸರಿಯಾಗಿ ಅವರು ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

9. ಅಭ್ಯರ್ಥಿಯು, ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನಕ್ಕೆ ಹಾಜರಾಗುವಾಗ "ಕರೆ ಪತ್ರ ಮತ್ತು ಗುರುತಿನ ರುಜುವಾತಿನ" (ಗುರುತಿನ ರುಜುವಾತಾಗಿ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪ್ಯಾನ್ ಕಾರ್ಡ್ ಅಥವಾ ಚಾಲನಾ ಪರವಾನಿಗೆ ಅಥವಾ ಪಡಿತರ ಚೀಟಿ ಅಥವಾ ಪಾಸ್ ಪೋರ್ಟ್ ಇವುಗಳ ಮೂಲ ಪ್ರತಿಗಳನ್ನು ಹಾಜರುಪಡಿಸಬಹುದು) ಪ್ರತಿಗಳನ್ನು, ಸಲ್ಲಿಸತಕ್ಕದ್ದು.

10. ಅಭ್ಯರ್ಥಿಯು, ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನಕ್ಕೆ ಹಾಜರಾಗುವಾಗ, ಪರಿಶೀಲನೆಗಾಗಿ ಎಸ್.ಎಸ್.ಎಲ್.ಸಿ./ಹತ್ತನೇ ತರಗತಿ, ಸ್ನಾತಕ, ಸ್ನಾತಕೋತ್ತರ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರಗಳು, ಯಾವುದೇ ಮೀಸಲಾತಿಯನ್ನು ಕೋರುವುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳು, 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು ಮತ್ತು ಮೂರು ನಡತೆ ಪ್ರಮಾಣ ಪತ್ರಗಳನ್ನು (ಒಂದು ನಡತೆ ಪ್ರಮಾಣ ಪತ್ರವನ್ನು ಅಂತಿಮವಾಗಿ ವ್ಯಾಸಂಗ ಮಾಡಿದ ಶಿಕ್ಷಣ ಸಂಸ್ಥೆಯಿಂದಲೂ, ಇನ್ನೆರಡು ನಡತೆ ಪ್ರಮಾಣ ಪತ್ರಗಳನ್ನು ಗೌರವಾನ್ವಿತ ವ್ಯಕ್ತಿಗಳಿಂದಲೂ ಪಡೆದು) – ಈ ಎಲ್ಲವುಗಳ ಸ್ವಯಂ ದೃಢೀಕೃತ ನಕಲು ಪ್ರತಿಗಳ ಒಂದು ಜೊತೆ ಮೂಲ ದಾಖಲೆಗಳೊಂದಿಗೆ ಹಾಜರುಪಡಿಸತಕ್ಕದ್ದು.

11. ಅರ್ಹ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳ ಆಧಾರದ ಮೇಲೆ ಮೌಖಿಕ ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು.

12. ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನ ಯಶಸ್ವಿಯಾದ ಮಾತ್ರದಿಂದಲೇ ನೇಮಕಾತಿಯ ಯಾವುದೇ ಹಕ್ಕು ಖಾತ್ರಿಯಾಗತಕ್ಕದ್ದಲ್ಲ ಹಾಗೂ ಆ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಅಗತ್ಯವೆಂದು ಪರಿಗಣಿಸಬಹುದಾದಂಥ ಪರಿಶೀಲನೆಗಳನ್ನು ಮಾಡಿದ ನಂತರ ಅಭ್ಯರ್ಥಿಯು ಎಲ್ಲಾ ಆಯಾಮಗಳಲ್ಲೂ ಅರ್ಹನಾಗಿದ್ದಾನೆ/ಳಾಗಿದ್ದಾಳೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದ ಹೊರತು ಅಭ್ಯರ್ಥಿಯನ್ನು ಅ ಹುದ್ದೆಗೆ ನೇಮಕ ಮಾಡತಕ್ಕದ್ದಲ್ಲ.

13. ಅಭ್ಯರ್ಥಿಯು, ಕರ್ನಾಟಕ ಉಚ್ಚ ನ್ಯಾಯಾಲಯವು ಅಧಿಸೂಚಿಸಬಹುದಾದಂಥ ಆನ್‌ಲೈನ್ ಬ್ಯಾಂಕಿಂಗ್ ವಿಧಾನದ ಮೂಲಕವಾಗಲಿ ಅಥವಾ ಚಲನ್ ನಮೂನೆ ಮೂಲಕವಾಗಲಿ ಅಧಿಸೂಚನೆಯಲ್ಲಿ ಸೂಚಿಸಬಹುದಾದಂಥ ಯುಕ್ತ ಅರ್ಜಿ ಶುಲ್ಕವನ್ನು ಸಂದಾಯ ಮಾಡತಕ್ಕದ್ದು. ಶುಲ್ಕವನ್ನು, ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್.ಬಿ.ಐ.) ಯಾವುದೇ ಶಾಖೆಯಲ್ಲಿ ಪಾವತಿ ಮಾಡತಕ್ಕದ್ದು.

**ಮುಂದುವರಿದಿದೆ...**

14. ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಯು, (ಗರಿಷ್ಠ 50 ಕೆ.ಬಿ. ಅಳತೆಯಿರುವ 5 ಸೆಂ.ಮೀ. ಉದ್ದ x 3.6 ಸೆಂ.ಮೀ. ಅಗಲವಿರುವ) ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಿಳಿಯ ಹಿನ್ನಲೆಯುಳ್ಳ ಭಾವಚಿತ್ರವನ್ನು ಸ್ಕ್ಯಾನ್ ಮಾಡತಕ್ಕದ್ದು ಹಾಗೂ ಜೆಪಿಜಿ ನಮೂನೆಯಲ್ಲಿ, ಬಿಳಿ ಕಾಗದದ ಮೇಲೆ ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ (2.5 ಸೆಂ.ಮೀ. ಉದ್ದ x 7.5 ಸೆಂ.ಮೀ. ಅಗಲವಿರುವ ಗರಿಷ್ಠ 25 ಕೆ.ಬಿ. ಪ್ರಮಾಣವಿರುವಂತೆ) ತನ್ನ ಸಹಿ ಮಾಡಿ ಸ್ಕ್ಯಾನ್ ಮಾಡತಕ್ಕದ್ದು ಹಾಗೂ ಅದನ್ನು ಅಪ್‌ಲೋಡ್ ಮಾಡತಕ್ಕದ್ದು. **ಜೆಪಿಜಿ ಭಾವಚಿತ್ರವು ಸ್ಪಷ್ಟವಾಗಿರಬೇಕು.**

**15. ಅಭ್ಯರ್ಥಿಯು, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ./ಹತ್ತನೇ ತರಗತಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಘಟಿಕೋತ್ಸವದ ಪ್ರಮಾಣ ಪತ್ರ ಹಾಗೂ ಮೀಸಲಾತಿ ಕೋರುವ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಪಿಡಿಎಫ್ ನಮೂನೆಯಲ್ಲಿ ಮಾತ್ರ ತಪ್ಪದೇ ಅಪಲೋಡ್ ಮಾಡತಕ್ಕದ್ದು, ಹಾಗೆ ಅಪ್‌ಲೋಡ್ ಆದ ಪ್ರತಿಗಳು ಓದಲು ಸ್ಪಷ್ಟವಾಗಿರಬೇಕು.**

16. ಅಭ್ಯರ್ಥಿಗಳು ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗ ಹೊಂದಿದ್ದರೆ, ಅಂತಹ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ **"ಹೌದು ಅಥವಾ ಇಲ್ಲ"** ಎಂಬುದನ್ನು 14ನೇ ಕಾಲಂನಲ್ಲಿ ನಮೂದಿಸತಕ್ಕದ್ದು ಮತ್ತು ಅವರು ಆಯ್ಕೆಗೊಂಡ ಸಂದರ್ಭದಲ್ಲಿ ಅವರು ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಯಿಂದ **"ನಿರಪೇಕ್ಷಣಾ ಪತ್ರ"**ವನ್ನು ಒದಗಿಸತಕ್ಕದ್ದು. (ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 11ರ ಪ್ರಕಾರ).

17. ಆ ಹುದ್ದೆಗೆ ಸಂಬಂಧಿಸಿದಂತೆ, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು ಮೇಲೆ ಸೂಚಿಸಲಾದಂತಹ ತನ್ನ ವಿದ್ಯಾರ್ಹತೆ ಹಾಗೂ ಇತರ ಮಾನದಂಡಗಳನ್ನು ಪೂರ್ಣಗೊಳಿಸಲಾಗಿದೆಯೆಂದು ಹಾಗೂ ತಾನು ಒದಗಿಸಿರುವ ಎಲ್ಲಾ ವಿವರಗಳು ಎಲ್ಲಾ ಆಯಾಮಗಳಲ್ಲೂ ಸರಿಯಾಗಿವೆಯೆಂದು ಖಚಿತಪಡಿಸತಕ್ಕದ್ದು. ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ವಿದ್ಯಾರ್ಹತೆಯ ಮಾನದಂಡಗಳನ್ನು ಪೂರ್ಣಗೊಳಿಸಿಲ್ಲವೆಂದು ಹಾಗೂ/ಅಥವಾ ಆತ/ಆಕೆ ಯಾವುದೇ ಪ್ರಮುಖ ವಾಸ್ತವಾಂಶಗಳನ್ನು ಮರೆಮಾಚಿರುತ್ತಾನೆ/ಳೆ, ತಿರುಚಿರುತ್ತಾನೆ/ಳೆ, ಮೊಟಕುಗೊಳಿಸಿರುತ್ತಾನೆ/ಳೆಂದು ಕಂಡುಬಂದ ಸಂದರ್ಭದಲ್ಲಿ ಆತನ/ಆಕೆಯ ಅಭ್ಯರ್ಥಿಕೆಯನ್ನು ರದ್ದುಗೊಳಿಸಲಾಗುವುದು. ಈ ಯಾವುದೇ ನ್ಯೂನತೆಗಳು ನೇಮಕಾತಿಯ ನಂತರ ಕಂಡುಬಂದರೂ ಸಹ, ಅಭ್ಯರ್ಥಿಯ ಸೇವಾ ಕರಾರು ವಜಾಗೊಳ್ಳಲು ಬದ್ಧವಾಗಿರುತ್ತದೆ. ತಪ್ಪಾದ, ಅಪೂರ್ಣವಾದ ಅಥವಾ ಸರಿಯಿಲ್ಲದ ಮಾಹಿತಿಯನ್ನು ಒದಗಿಸುವುದು ಅನರ್ಹತೆಗೆ ಕಾರಣವಾಗುವುದು ಮಾತ್ರವಷ್ಟೇ ಅಲ್ಲದೆ, ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೂ ಸಹ ಅವಕಾಶ ಮಾಡಿಕೊಡುತ್ತದೆ.

**ಸಹಿ/–**
**(ಟಿ.ಜಿ. ಶಿವಶಂಕರೇಗೌಡ)**
**ಮಹಾವಿಲೇಖನಾಧಿಕಾರಿ**